# ಡಿಜಿಟಲ್ ಯುಗದಲ್ಲಿ ರಂಗಭೂಮಿಯ ಪ್ರಸ್ತುತತೆ

**ಸಂಗೀತ***

**DOI: https://doi.org/10.5281/zenodo.22107194**

**ABSTRACT**

ಡಿಜಿಟಲ್ ತಂತ್ರಜ್ಞಾನವು ಮಾನವ ಜೀವನದ ಬಹುತೇಕ ಎಲ್ಲ ಕ್ಷೇತ್ರಗಳನ್ನು ಆವರಿಸಿಕೊಂಡಿರುವ ಇಂದಿನ ಕಾಲಘಟ್ಟದಲ್ಲಿ ರಂಗಭೂಮಿಯ ಪ್ರಸ್ತುತತೆಯ ಕುರಿತ ಚರ್ಚೆಯು ಅಗತ್ಯ ಮತ್ತು ಅವಶ್ಯಕವೆನಿಸಿಕೊಳ್ಳುತ್ತದೆ. ರಂಗಭೂಮಿಯ ವಿಶೇಷವೆಂದರೆ ವೇದಿಕೆಯ ಮೇಲೆ ನಡೆಯುವ ಅಭಿನಯ, ಸಂಭಾಷಣೆ, ಸಂಗೀತ ಮತ್ತು ಭಾವನೆಗಳು ಕಲಾವಿದ ಮತ್ತು ಪ್ರೇಕ್ಷಕರ ನಡುವೆ ನೇರ ಸಂಪರ್ಕವನ್ನು ಸಾಧಿಸುತ್ತದೆ. ಪ್ರತಿ ಪ್ರದರ್ಶನವೂ ಆ ಕ್ಷಣದಲ್ಲೇ ಜೀವ ತಳೆಯುವಂತಹದ್ದಾಗಿರುವುದರಿಂದ ರಂಗಭೂಮಿಯು ಭಾವನೆ ಮತ್ತು ಸಂಸ್ಕೃತಿಯನ್ನು ಜೀವಿಸುವ ವೇದಿಕೆಯಾಗಿದೆ. ಮತ್ತು ರಂಗಭೂಮಿಯು ತಂತ್ರಜ್ಞಾನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ (Digital Detox), ಮಾನಸಿಕ ಆರೋಗ್ಯದ ಕಡೆಗೆ ಗಮನ ಹರಿಸಲು ಸಹಾಯ ಮಾಡುತ್ತದೆ.

ಸಮಾಜದಲ್ಲಿ ನಡೆಯುವ ಹಲವು ಸಂಕೀರ್ಣ ವಿಚಾರಗಳನ್ನು ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವಂತೆ, ವಿಚಾರವಂತಿಕೆ ಮೂಡಿಸುತ್ತಾ ಮಾನವೀಯ ಮೌಲ್ಯಗಳನ್ನು ಜನಸಾಮಾನ್ಯರಲ್ಲಿ ಬಿತ್ತುವಲ್ಲಿ, ಸಮಾಜವನ್ನು ಚಿಂತನೆಗೆ ಒಳಪಡಿಸುವಲ್ಲಿ ರಂಗಭೂಮಿಯ ಪಾತ್ರ ಬಹಳ ದೊಡ್ಡದು. ಹಾಗಾಗಿ ಶೈಕ್ಷಣಿಕ ಚಟುವಟಿಕೆಯಾಗಿ ರಂಗಭೂಮಿಯ ಶಿಕ್ಷಣಕ್ಕೆ ವಿಶ್ವವಿದ್ಯಾಲಯಗಳಲ್ಲಿ ಆದ್ಯತೆ ನೀಡುವುದು ಡಿಜಿಟಲ್ ಯುಗದಲ್ಲಿ ಅಗತ್ಯವಾಗಿದೆ.

**KEYWORDS:** ಜಾಗತಿಕ ಹಳ್ಳಿ, ವರ್ಚುವಲ್ ಜಗತ್ತು, ರಂಗಭೂಮಿ, ನೀನಾಸಂ, ರಂಗಾಯಣ, ವ್ಯಕ್ತಿತ್ವ ವಿಕಸನ.

* **ಸಂಗೀತ,** ಸಂಶೋಧನಾ ವಿದ್ಯಾರ್ಥಿನಿ ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜೆ.

**ಡಿಜಿಟಲ್ ಯುಗದಲ್ಲಿ ರಂಗಭೂಮಿಯ ಪ್ರಸ್ತುತತೆ:**

ಜಾಗತಿಕ ಹಳ್ಳಿ (Global Village) ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ ಕೆನಡಾದ ತತ್ವಜ್ಞಾನಿಯಾದ, ಆಧುನಿಕ ಮಾಧ್ಯಮ ಅಧ್ಯಯನದ ಪಿತಾಮಹ ಎಂದು ಬಿರುದಾಂಕಿತರಾದ ಮಾರ್ಷಲ್ ಮೆಕ್ಲುಹನ್ (Marshal McLuhan) ಅವರು 1960ರಲ್ಲಿಯೇ – ಭವಿಷ್ಯದಲ್ಲಿ ನಿರ್ಮಾಣವಾಗುವ ತಂತ್ರಜ್ಞಾನ ಸಹಿತವಾದ ಜಗತ್ತನ್ನು ವಿವರಿಸುತ್ತಾ 'ಜಾಗತಿಕ ಹಳ್ಳಿ' ಎಂಬ ಪರಿಕಲ್ಪನೆಯನ್ನು ಬಳಸುತ್ತಾರೆ. ಇದರ ಅರ್ಥ ತಂತ್ರಜ್ಞಾನವು ಇಡೀ ಪ್ರಪಂಚವನ್ನು ಒಂದು ಸೂರಿನಲ್ಲಿ ತಂದು ನಿಲ್ಲಿಸಿದೆ ಅಥವಾ ಇಡೀ ಜಗತ್ತು ಒಂದು ಹಳ್ಳಿಯಂತೆ ಪರಸ್ಪರ ಸಂಪರ್ಕಿಸಿದೆ ಎಂದು. ಫೋನ್, ಇಂಟರ್ನೆಟ್, ಸಾಮಾಜಿಕ ಜಾಲತಾಣಗಳು ಉದಾಹರಣೆಗೆ ಫೇಸ್‌ಬುಕ್, ಇನ್ಸ್ಟಾಗ್ರಾಮ್, ಎಕ್ಸ್, ಸ್ನ್ಯಾಪ್‌ಚಾಟ್, ಯೂಟ್ಯೂಬ್ ಇತ್ಯಾದಿ.. ಮತ್ತು ಕೃತಕ ಬುದ್ಧಿಮತ್ತೆ AI ಮೊದಲಾದ ತಂತ್ರಜ್ಞಾನಗಳ ಪ್ರಭಾವ ಹೆಚ್ಚಿರುವ ಹಾಗೂ ವ್ಯಾಪಕವಾಗಿ ಬಳಕೆಯಾಗುತ್ತಿರುವ ಪ್ರಸ್ತುತ ಕಾಲಘಟ್ಟವನ್ನು 'ಡಿಜಿಟಲ್ ಯುಗ' ಎಂದು ಕರೆಯಲಾಗುವುದು.

ತಂತ್ರಜ್ಞಾನವು ಮಾನವನ ದೈನಂದಿನ ಬದುಕಿನ ಸಂಕೀರ್ಣ ಕೆಲಸಗಳನ್ನು ಸರಳವನ್ನಾಗಿಸಿ, ವೇಗ ಮತ್ತು ಪರಿಣಾಮಕಾರಿಯಾಗಿ ಜೀವನ ನಡೆಸುವಲ್ಲಿ ಸಹಕಾರಿಯಾಗಿದೆ. ಆದರೆ ಇದೇ ತಂತ್ರಜ್ಞಾನವು ಮಾನವನ ದೈಹಿಕ ಮತ್ತು ಮಾನಸಿಕ ಆಲಸ್ಯವನ್ನು ಹೆಚ್ಚಿಸಿದೆ ಎಂದು ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಜಗತ್ತಿನ ಅತ್ಯಂತ ಶ್ರೀಮಂತ ಉದ್ಯಮಿಯಾದ ಎಲಾನ್ ಮಸ್ಕ್ (Elon Musk) ಅವರ ಪ್ರಕಾರ ಮುಂದಿನ 10 ವರ್ಷಗಳಲ್ಲಿ (2036) ಕೃತಕ ಬುದ್ಧಿಮತ್ತೆ (AI) ಮತ್ತು ರೋಬೋಟ್ ಗಳ ಶ್ರೇಷ್ಠ ಬುದ್ಧಿಮತ್ತೆಯಿಂದಾಗಿ, ಮನುಷ್ಯರು ಅವುಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳಲಿದ್ದಾರೆ ಎಂದು ಭವಿಷ್ಯ ನುಡಿದಿದ್ದಾರೆ. ಒಂದು ವೇಳೆ ಹಾಗಾದ ಪಕ್ಷದಲ್ಲಿ ಮಾನವನ ಅಸ್ತಿತ್ವವೇ ಪ್ರಶ್ನೆಯಾಗಿ ಉಳಿಯಬಹುದು.

ವರ್ಚುವಲ್ ಜಗತ್ತಿನಲ್ಲಿ (Virtual World) ಜೀವಿಸುತ್ತಿರುವ ಮಾನವನಿಗೆ ಇಂದು ಜಗತ್ತಿನ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯೊಂದಿಗೆ ಮುಖಾಮುಖಿಯಾಗಿ ಮಾತನಾಡಬಹುದು. ಆದರೆ ತನ್ನ ಕುಟುಂಬ, ಸಂಬಂಧಿಕರು, ಸ್ನೇಹಿತರು, ಸಹೋದ್ಯೋಗಿಗಳೊಂದಿಗಿನ ನೈಜ ಪ್ರಪಂಚದಲ್ಲಿ ಬೆರೆಯುವಲ್ಲಿ ವಿಫಲನಾಗುತ್ತಿದ್ದಾನೆ ಹಾಗಾಗಿ ಖಿನ್ನತೆ, ಒಂಟಿತನ, ಭಯ ಅವನನ್ನು ಕಾಡುತ್ತಿದೆ. ಇತ್ತೀಚೆಗೆ ಮಕ್ಕಳಲ್ಲಿ ಕಂಡುಬರುವ ಮಾತಿನ ತೊಡಕಿಗೆ ಮೊಬೈಲ್/ಟಿವಿಯ ಅತಿಯಾದ ಬಳಕೆ ಮತ್ತು ಮಗುವಿನೊಂದಿಗೆ ನೇರ ಸಂಭಾಷಣೆ ಕಡಿಮೆಯಾಗುತ್ತಿರುವುದು ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ಹಾಗಾಗಿ ಡಿಜಿಟಲ್ ತಂತ್ರಜ್ಞಾನವು ಮಾನವ ಜೀವನದ ಬಹುತೇಕ ಎಲ್ಲ ಕ್ಷೇತ್ರಗಳನ್ನು ಆವರಿಸಿಕೊಂಡಿರುವ ಇಂದಿನ ಕಾಲಘಟ್ಟದಲ್ಲಿ ರಂಗಭೂಮಿಯ ಪ್ರಸ್ತುತತೆಯ ಕುರಿತ ಚರ್ಚೆಯು ಅಗತ್ಯ ಮತ್ತು ಅವಶ್ಯಕವೆನಿಸಿಕೊಳ್ಳುತ್ತದೆ. ರಂಗಭೂಮಿಯ ವಿಶೇಷವೆಂದರೆ ವೇದಿಕೆಯ ಮೇಲೆ ನಡೆಯುವ ಅಭಿನಯ, ಸಂಭಾಷಣೆ, ಸಂಗೀತ ಮತ್ತು ಭಾವನೆಗಳು ಕಲಾವಿದ ಮತ್ತು ಪ್ರೇಕ್ಷಕರ ನಡುವೆ ನೇರ ಸಂಪರ್ಕವನ್ನು ಸಾಧಿಸುತ್ತದೆ. ಪ್ರತಿ ಪ್ರದರ್ಶನವೂ ಆ ಕ್ಷಣದಲ್ಲೇ ಜೀವ ತಳೆಯುವಂತಹದ್ದಾಗಿರುವುದರಿಂದ ರಂಗಭೂಮಿಯು ಭಾವನೆ ಮತ್ತು ಸಂಸ್ಕೃತಿಯನ್ನು ಜೀವಿಸುವ ವೇದಿಕೆಯಾಗಿದೆ. ನಿರಂತರವಾಗಿ ಸ್ಕ್ರೀನ್‌ಗಳನ್ನು ನೋಡುವ ಇಂದಿನ ಪೀಳಿಗೆಗೆ ರಂಗಭೂಮಿಯು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ಮತ್ತು ರಂಗಭೂಮಿಯು ತಂತ್ರಜ್ಞಾನದ ಮೇಲಿನ

ಅವಲಂಬನೆಯನ್ನು ಕಡಿಮೆ ಮಾಡಿ (Digital Detox), ಮಾನಸಿಕ ಆರೋಗ್ಯದ ಕಡೆಗೆ ಗಮನ ಹರಿಸಲು ಸಹಾಯ ಮಾಡುತ್ತದೆ.

**ರಂಗಭೂಮಿಯ ಸ್ಥೂಲ ಪರಿಚಯ:**

ಕ್ರಿ.ಶ. 1ನೇ ಶತಮಾನದಲ್ಲಿ ರಚಿತವಾಗಿರಬಹುದಾದ ಭರತನ 'ನಾಟ್ಯಶಾಸ್ತ್ರ'ವು ಕಲೆಯಲ್ಲಿ – ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆ, ಸಂಗೀತ, ನರ್ತನ, ಕಾವ್ಯ, ನಾಟಕ ಎಂಬ ಏಳು ಪ್ರಕಾರಗಳಿವೆ ಎಂದು ತಿಳಿಸುತ್ತದೆ. ಚಿಕ್ಕದೇವರಾಜ ಒಡೆಯರ (1672–1704) ಆಸ್ಥಾನ ಕವಿಯಾಗಿದ್ದ ಸಿಂಗರಾರ್ಯನು, ಶ್ರೀಹರ್ಷನ ರತ್ನಾವಳಿಯನ್ನು ಆಧಾರವನ್ನಾಗಿಸಿಕೊಂಡು 'ಮಿತ್ರವಿಂದಾ ಗೋವಿಂದ' ಎಂಬ ಕನ್ನಡ ನಾಟಕವನ್ನು ರಚಿಸಿದ. ಇದನ್ನು ಕನ್ನಡದ ಮೊದಲ ನಾಟಕ ಎಂದು ಕರೆಯಲಾಗಿದೆ. ಕರ್ಕಿ ವೆಂಕಟರಮಣ ಶಾಸ್ತ್ರಿ ಅವರ ಹವ್ಯಕ ಭಾಷೆಯಲ್ಲಿರುವ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ'ವು ಕನ್ನಡದ ಮೊದಲ ಸ್ವತಂತ್ರ ನಾಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಬಾಲ್ಯವಿವಾಹ, ವರದಕ್ಷಿಣೆಯ ಪಿಡುಗು ಮೊದಲಾದ ಸಾಮಾಜಿಕ ಪಿಡುಗುಗಳನ್ನು ಚಿತ್ರಿಸಿದ ಈ ನಾಟಕವು 1887ರಲ್ಲಿ ರಚಿತವಾಗಿದೆ. ಸಮಕಾಲೀನ ಚಿಂತನೆಗಳಿಗೆ ಸ್ಪಂದಿಸುವ ನಾಟಕಗಳನ್ನು ಸೃಷ್ಟಿಸುವಲ್ಲಿ ಟಿ.ಪಿ ಕೈಲಾಸಂ ಮತ್ತು ಶ್ರೀರಂಗರು ಮುಂಚೂಣಿಯಲ್ಲಿ ನಿಂತವರು. ಟಿ.ಪಿ ಕೈಲಾಸಂ ಅವರು ಟೊಳ್ಳು–ಗಟ್ಟಿ, ಶ್ರೀರಂಗರು ಹರಿಜನವಾರ, ಅಗ್ನಿಪರೀಕ್ಷೆ ಅಂತಹ ಸಾಮಾಜಿಕ ಕಳಕಳಿ – ಚಿಂತನೆಯನ್ನು ಹೊಂದಿರುವಂತಹ ನಾಟಕಗಳನ್ನು ರಚಿಸಿದರು. ಲಂಕೇಶರ 'ತೆರೆಗಳು', ಕಂಬಾರರ 'ಸಂಗ್ಯಾ ಬಾಳ್ಯಾ' ಮತ್ತು 'ಜೋಕುಮಾರಸ್ವಾಮಿ', ಗಿರೀಶ್ ಕಾರ್ನಾಡರ 'ತುಘಲಕ್', 'ಹಯವದನ' ಲಂಕೇಶರ 'ತೆರೆಗಳು', ಮೊದಲಾದ ನಾಟಕಗಳು ಅನೇಕ ಪ್ರಯೋಗಗಳನ್ನು ಕಂಡ ನಾಟಕಗಳೆಂಬ ಕೀರ್ತಿಗೆ ಪಾತ್ರವಾದವು. 70ರ ದಶಕದಲ್ಲಿ ಬಂದ ಲಂಕೇಶರ ಸಂಕ್ರಾಂತಿ ನಾಟಕ, ಜಾನಪದ ದಾಟಿಯಲ್ಲಿ ಬಂದಿರುವ ಕಂಬಾರರ ಜೋಕುಮಾರ ಸ್ವಾಮಿ, ಸಂಗ್ಯಾ ಬಾಳ್ಯಾ ನಾಟಕ, ಜಡಭರತರ ಸತ್ತವರ ನೆರಳು, ಚಂಪಾರ ಟಿಂಗರ ಬುಡ್ಡಣ್ಣ ಮೊದಲಾದ ನಾಟಕಗಳಂತೂ ಆಧುನಿಕ ರಂಗಭೂಮಿಯ ಹೆಬ್ಬಾಗಿಲನ್ನು ತೆರೆದವು ಎಂದೇ ಹೇಳಬಹುದು. 80ರ ದಶಕದಲ್ಲಿ ಕತೆ, ಕವನ, ಕಾದಂಬರಿಗಳನ್ನು ರಂಗಕ್ಕೆ ಅಳವಡಿಸುವ ಹೊಸ ಪ್ರಯೋಗಗಳು ಪ್ರಾರಂಭವಾದವು. ಅದರಂತೆಯೇ ಒಡಲಾಳ, ಮಹಾ ಚೈತ್ರದಂತಹ, ನಾಟಕಗಳು, ತೇಜಸ್ವಿ ಅವರ ಚಿದಂಬರ ರಹಸ್ಯ, ದೇವನೂರರ ಒಡಲಾಳ, ಕುಸುಮ ಬಾಲೆ, ಕಂಬಾರರ ಸಿಂಗಾರವ್ವ ಮತ್ತು ಅರಮನೆ ಮೊದಲಾದ ಕಾದಂಬರಿಗಳನ್ನು ನಾಟಕಕ್ಕೆ ಅಳವಡಿಸುವ ಪರಂಪರೆ ಪ್ರಾರಂಭವಾಯಿತು. ಪ್ರಸಿದ್ಧ ವಿದೇಶಿ ನಾಟಕಕಾರರಾದ ಶೇಕ್ಸ್‌ಪಿಯರ್, ಬ್ರೆಕ್ಟ್, ಅಲ್ಬರ್ಟ್ ಕಾಮೂ, ಸ್ಯಾಮ್ಯುಯೆಲ್ ಬೆಕೆಟ್, ಹೆನ್ರಿಕ್ ಇಬ್ಸನ್, ಆಂಟನ್ ಚೆಕಾಫ್, ಯುಜೀನ್ ಅಯನೆಸ್ಕೊ, ಲುಯಿಗಿ ಪಿರಾಂಡೆಲೊ ಮೊದಲಾದ ನಾಟಕಕಾರರ ನಾಟಕಗಳನ್ನು ಕನ್ನಡ ರಂಗಭೂಮಿಯು ಬೃಹತ್ ಪ್ರಮಾಣದಲ್ಲಿ ಪ್ರದರ್ಶನಕ್ಕಿಟ್ಟಿತ್ತು.

**ಕರ್ನಾಟಕದ ಪ್ರಮುಖ ರಂಗಭೂಮಿ ತರಬೇತಿ ಕೇಂದ್ರಗಳು:**

ಸಾಗರದ ಹೆಗ್ಗೋಡಿನಲ್ಲಿ ಕೆ. ವಿ. ಸುಬ್ಬಣ್ಣನವರು 1949ರಲ್ಲಿ ಸ್ಥಾಪಿಸಿದ 'ನೀನಾಸಂ' ಸಂಸ್ಥೆಯು ಯುವ ಕಲಾವಿದರಿಗಾಗಿ ರಂಗಭೂಮಿಯ ತರಬೇತಿ ಮತ್ತು ಬೇಸಿಗೆ ಶಿಬಿರಗಳನ್ನು ಹಾಗೂ ಕಲೆ, ಸಾಹಿತ್ಯ ಮತ್ತು ಸಾಮಾಜಿಕ ವಿಚಾರಗಳ ಕುರಿತು ವಾರ್ಷಿಕ ಉಪನ್ಯಾಸ ಹಾಗೂ ಚರ್ಚಾಕೂಟಗಳನ್ನು ಏರ್ಪಡಿಸುತ್ತಾ ಯುವಜನರಲ್ಲಿ ಮತ್ತು ಸಾಹಿತ್ಯಾಸಕ್ತರಲ್ಲಿ ರಂಗಭೂಮಿಯ ಪ್ರಜ್ಞೆ ಮೂಡುವಲ್ಲಿ ಸಹಕಾರಿಯಾಗಿದೆ.

ಕನ್ನಡ ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ, ಬಿ. ವಿ. ಕಾರಂತರ ನೇತೃತ್ವದಲ್ಲಿ 1989ರಲ್ಲಿ ಮೈಸೂರಿನ ಕಲಾಮಂದಿರದಲ್ಲಿ 'ರಂಗಾಯಣ' ಎಂಬ ಹೆಸರಿನಲ್ಲಿ ಪ್ರತಿಭಾನ್ವಿತ ಕಲಾವಿದರ, ನಿರ್ದೇಶಕರ ರಂಗತಂಡವೊಂದು ರಚನೆಗೊಂಡು 'ರಂಗಾಯಣ' ಎಂಬ ಸಂಸ್ಥೆ ಸ್ಥಾಪನೆಗೊಂಡಿತ್ತು. ಈ ಸಂಸ್ಥೆ ವತಿಯಿಂದ ಶಾಲಾ ಮಕ್ಕಳಿಗೆ ಬೇಸಿಗೆ ರಜೆಯಲ್ಲಿ ರಂಗಭೂಮಿ, ಕಲೆ ಮತ್ತು ಸಾಹಿತ್ಯದ ಪರಿಚಯ ಮಾಡಿಕೊಡಲು, ವಿಶೇಷ ಶಿಬಿರಗಳನ್ನು ಸಂಯೋಜಿಸುತ್ತದೆ. ಮೈಸೂರು ಕೇಂದ್ರದಲ್ಲಿ ವೃತ್ತಿಪರ ನಟನೆಯನ್ನು ಕಲಿಯಲು ಬಯಸುವವರಿಗಾಗಿ ಒಂದು ವರ್ಷದ ವಸತಿ ಸಹಿತ ರಂಗ ಡಿಪ್ಲೊಮೋ ಕೋರ್ಸ್ ನಡೆಸಲಾಗುತ್ತದೆ.

ರಾಷ್ಟ್ರೀಯ ನಾಟಕ ಶಾಲೆ (NSD) ಬೆಂಗಳೂರು ಕೇಂದ್ರವು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಆಶ್ರಯದಲ್ಲಿ ಬರುವ ಪ್ರಾದೇಶಿಕ ಕೇಂದ್ರವಾಗಿದೆ. ದಕ್ಷಿಣ ಭಾರತದ ರಂಗಾಸಕ್ತರಿಗೆ ವೃತ್ತಿಪರ ರಂಗಭೂಮಿ ತರಬೇತಿ ನೀಡುವ ಸಲುವಾಗಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ.

ರಂಗಭೂಮಿಯಲ್ಲಿ ಪಾತ್ರದ ಅಭಿವ್ಯಕ್ತಿಗೆ ಭಾಷೆ, ಶಬ್ದ, ಉಚ್ಚಾರಣೆ, ಧ್ವನಿ ಮತ್ತು ಸ್ವರದ ಏರಿಳಿತಗಳು ಅತ್ಯಂತ ಪ್ರಮುಖವಾದ ಸಾಧನೆಗಳಾಗಿರುತ್ತವೆ. ಹಾಗಾಗಿ ಭಾಷೆಯ ಉಳಿವಿಕೆಯಲ್ಲಿ ರಂಗಭೂಮಿಯ ಪಾತ್ರ ಬಹಳ ಹಿರಿದಾದದ್ದು. ಉಚ್ಚಾರಣೆಯ ಶುದ್ಧತೆ, ಬಳಕೆ ಹಾಗೂ ಪದ ಸಂಪತ್ತಿನ ಜ್ಞಾನ, ಶಬ್ದ ಭಂಡಾರ, ಅರ್ಥಗ್ರಹಿಕೆ ಪ್ರಮುಖ ಪಾತ್ರ ವಹಿಸುತ್ತದೆ. ಇದು ಕೇವಲ ಮನೋರಂಜನೆಯ ಮಾಧ್ಯಮವಾಗಿರದೆ ಜನರೊಂದಿಗೆ ನೇರವಾಗಿ ಸಂವಹನ ನಡೆಸುತ್ತಾ ವ್ಯಕ್ತಿತ್ವ ವಿಕಸನ (ವ್ಯಕ್ತಿತ್ವವನ್ನು ರೂಪಿಸುತ್ತದೆ) ಮತ್ತು ಕ್ರಿಯಾಶೀಲತೆಗೆ ದಾರಿ ಮಾಡಿ ಕೊಡುತ್ತದೆ ಹಾಗೂ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕರೆದೊಯ್ಯುವ ಮಾಧ್ಯಮವಾಗಿ ಸಹಕಾರಿಯಾಗಿದೆ. ಮನುಷ್ಯನ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಾ, ಸ್ಪಂದಿಸುವ ರಂಗಭೂಮಿಯು ಸಮಾಜದ ಕನ್ನಡಿ ಇದ್ದ ಹಾಗೆ, ಸಮಾಜದಲ್ಲಿ ನಡೆಯುವ ಘಟನೆಗಳಿಂದಲೇ ಸ್ಫೂರ್ತಿ ಪಡೆದು ಸಮಾಜವನ್ನು ತಿದ್ದುವ ಕೆಲಸ ಮಾಡುತ್ತದೆ. ರಂಗಭೂಮಿಯು ಹಲವಾರು ಕಲಾವಿದರಿಗೆ ಆದಾಯದ ಮೂಲವಾಗಿ ಮತ್ತು ಜೀವನೋಪಾಯಕ್ಕೆ ದಾರಿಯಾಗಿದೆ. ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಂಗಭೂಮಿಯ ಕೊಡುಗೆಯು ಅಪಾರವಾದದ್ದು, ಉದಾಹರಣೆಯಾಗಿ ಗುಬ್ಬಿ ವೀರಣ್ಣ ನಾಟಕ ಕಂಪನಿಯು ಸಿನಿಮಾ ರಂಗದ ಕಲಾವಿದರನ್ನು ಪೋಷಿಸುವಲ್ಲಿ ಅಗಾಧವಾದ ಕೊಡುಗೆ ನೀಡಿದೆ ಎಂದೇ ಹೇಳಬಹುದು.

ರಂಗಭೂಮಿಯು ಸಾಮಾಜಿಕ ಸಂವಾದ ಮತ್ತು ಚಿಂತನೆಗೆ ಉತ್ತಮವಾದ ವೇದಿಕೆ ರೂಪಿಸುವುದರೊಂದಿಗೆ, ಪ್ರೇಕ್ಷಕರಿಗೆ ಮನೋರಂಜನೆಯನ್ನು ನೀಡುತ್ತದೆ. ಉದಾಹರಣೆಗೆ ಮಕ್ಕಳ ರಂಗಭೂಮಿ ಚಟುವಟಿಕೆಯನ್ನು ಗಮನಿಸುವುದಾದರೆ, ಮಕ್ಕಳ ರಂಗಭೂಮಿಯು ಕೇವಲ ಮನೋರಂಜನೆಯ ಉದ್ದೇಶದಿಂದ ಮಾತ್ರ ರೂಪಿತವಾಗಿರುವುದಲ್ಲ, ಬದಲಾಗಿ ಮಕ್ಕಳಲ್ಲಿ ಆತ್ಮವಿಶ್ವಾಸ, ಕಲ್ಪನಾಶಕ್ತಿ, ವ್ಯಕ್ತಿತ್ವ ವಿಕಸನ, ಸೃಜನಶೀಲತೆ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸಲು ಸಹಕಾರಿಯಾಗಿರುವ ಮನೋವಿಕಾಸ ಶಿಬಿರಗಳಂತೆ ಕಾರ್ಯನಿರ್ವಹಿಸುತ್ತದೆ.

**ಮಕ್ಕಳ ರಂಗಭೂಮಿಯ ಪ್ರಾಮುಖ್ಯತೆ:**

ವ್ಯಕ್ತಿತ್ವ ವಿಕಸನ: ರಂಗಭೂಮಿಯು ಮಕ್ಕಳಲ್ಲಿರುವ ಭಯವನ್ನು ದೂರವಾಗಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಮತ್ತು ಇದರೊಂದಿಗೆ ನಾಯಕತ್ವದ ಗುಣವನ್ನು ಬೆಳೆಸುತ್ತದೆ.

ಮಕ್ಕಳಲ್ಲಿ ಸಾಹಿತ್ಯ, ಸಂಗೀತ, ನೃತ್ಯ ಮತ್ತು ಅಭಿನಯದ ಆಸಕ್ತಿಯನ್ನು ಹುಟ್ಟಿಸಿ ಶಿಕ್ಷಣವನ್ನು ಹೆಚ್ಚು ಆಸಕ್ತಿದಾಯಕವಾಗಿಯೂ ಮತ್ತು ಅನುಭವನಾತ್ಮಕವಾಗಿ ಕಲಿಸುವಲ್ಲಿ ಸಹಕಾರಿಯಾಗುತ್ತದೆ. ಮಕ್ಕಳು ಸಹಾನುಭೂತಿ, ಸಹಕಾರ, ಮಾನವೀಯತೆ ಮತ್ತು ಪರಸ್ಪರ ಹೊಂದಾಣಿಕೆಯಂತಹ ಸಾಮಾಜಿಕ ಜೀವನ ಕೌಶಲ್ಯಗಳನ್ನು ಕಲಿಯುತ್ತಾರೆ.

ಭಾಷಾ ಅಭಿವ್ಯಕ್ತಿ: ಸಂಭಾಷಣೆ, ಸಂವಾದ ಹಾಗೂ ಕಥಾವಾಚನಗಳ ಮೂಲಕ ಮಕ್ಕಳಲ್ಲಿ ಮಾತಿನ ಸ್ಪಷ್ಟತೆ ಹಾಗೂ ಭಾವನೆಗಳನ್ನು ಗ್ರಹಿಸುವ ನೈತಿಕ ಮೌಲ್ಯವು ಹುಟ್ಟುತ್ತದೆ.

ಆದ್ಯ ರಂಗಾಚಾರ್ಯರು ತಮ್ಮ ಪುಸ್ತಕವಾದ 'ಕನ್ನಡ ರಂಗಭೂಮಿಯ ಪುರೋಭಿವೃದ್ಧಿ'ಯಲ್ಲಿ ಹೀಗೆ ಹೇಳುತ್ತಾರೆ – "ನಾನು ಒಂದೆರಡು ಸಂದರ್ಭಗಳಲ್ಲಿ ಅಮೇರಿಕದ ವಿಶ್ವವಿದ್ಯಾಲಯಗಳಲ್ಲಿಯ ನಾಟಕ ಪ್ರಾಧ್ಯಾಪಕರಿಗೆ ಒಂದೇ ಪ್ರಶ್ನೆಯನ್ನು ಕೇಳಿದ್ದೆ. ಈ ವಿಷಯದಲ್ಲಿ ಶಿಕ್ಷಣ ಕೊಡುವ ಉದ್ದೇಶವೇನು ? ಒಳ್ಳೆಯ ನಟರನ್ನು ತಯಾರಿಸುವುದೇ ? – ಬೇರೆ ಬೇರೆ ಕಾಲಕ್ಕೆ ಇಬ್ಬರು ಪ್ರಾಧ್ಯಾಪಕರು ಒಂದೇ ಉತ್ತರವನ್ನು ಕೊಟ್ಟರು. ನಮ್ಮ ಉದ್ದೇಶವೆಂದರೆ ಯಾವುದು ಒಳಿತು, ಯಾವುದು ಕೆಟ್ಟುದು ಎಂದು ನಾಟಕವನ್ನು ವಿಮರ್ಶಿಸಬಲ್ಲ ಪ್ರೇಕ್ಷಕರನ್ನು ತಯಾರಿಸುವುದು." ಹಾಗಾಗಿ ಸಮಾಜದಲ್ಲಿ ನಡೆಯುವ ಹಲವು ಸಂಕೀರ್ಣ ವಿಚಾರಗಳನ್ನು ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವಂತೆ, ವಿಚಾರವಂತಿಕೆ ಮೂಡಿಸುತ್ತಾ ಮಾನವೀಯ ಮೌಲ್ಯಗಳನ್ನು ಜನಸಾಮಾನ್ಯರಲ್ಲಿ ಬಿತ್ತುವಲ್ಲಿ, ಸಮಾಜವನ್ನು ಚಿಂತನೆಗೆ ಒಳಪಡಿಸುವಲ್ಲಿ ರಂಗಭೂಮಿಯ ಪಾತ್ರ ಬಹಳ ದೊಡ್ಡದು. ರಂಗಭೂಮಿಯು ಪ್ರೀತಿ, ಸಹಾನುಭೂತಿ ಮತ್ತು ನೈತಿಕತೆಯನ್ನು ಕಲಿಸುತ್ತದೆ. ಹಾಗಾಗಿ ಶೈಕ್ಷಣಿಕ ಚಟುವಟಿಕೆಯಾಗಿ ರಂಗಭೂಮಿಯ ಶಿಕ್ಷಣಕ್ಕೆ ವಿಶ್ವವಿದ್ಯಾಲಯಗಳಲ್ಲಿ ಆದ್ಯತೆ ನೀಡುವುದು ಡಿಜಿಟಲ್ ಯುಗದಲ್ಲಿ ಅಗತ್ಯವಾಗಿದೆ.

**ಟಿಪ್ಪಣಿಗಳು:**

1. ಡಿಜಿಟಲ್ ಡಿಟಾಕ್ಸ್ – ಫೋನ್, ಕಂಪ್ಯೂಟರ್, ಇಂಟರ್ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದ ಎಲೆಕ್ಟ್ರಾನಿಕ್ ಸಾಧನಗಳ (ಸ್ಕ್ರೀನ್ ಟೈಮ್) ಬಳಕೆಯಿಂದ ನಿರ್ದಿಷ್ಟ ಅವಧಿಯವರೆಗೂ ದೂರವಿರುವುದು.
2. ಅಲ್ಬರ್ಟ್ ಕಾಮೂ (Albert Camus): ಫ್ರಾನ್ಸ್ ದೇಶದ ತತ್ವಜ್ಞಾನಿ ಮತ್ತು ಪ್ರಸಿದ್ಧ ಬರಹಗಾರ. 1957ರಲ್ಲಿ ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ನೊಬೆಲ್ ಪುರಸ್ಕಾರವನ್ನು ಪಡೆದುಕೊಂಡವರು. ಇವರು ಅಸ್ತಿತ್ವವಾದ ಸಿದ್ಧಾಂತಕ್ಕೆ ಪ್ರಸಿದ್ಧರು.
3. ಸ್ಯಾಮ್ಯುಯೆಲ್ ಬೆಕೆಟ್ (Samuel Beckett): ಐರಿಶ್ ನಾಟಕಕಾರ. ಇವರು ಅಸಂಗತ ನಾಟಕಗಳಿಗೆ ಪ್ರಸಿದ್ಧರು.
4. ಹೆನ್ರಿಕ್ ಇಬ್ಸನ್ (Henrik Ibsen): ಆಧುನಿಕ ನಾಟಕದ ಪಿತಾಮಹ ಎಂದು ಹೆಸರಾದ ಇವರು ನಾರ್ವೆಯ ಪ್ರಸಿದ್ಧ ನಾಟಕಕಾರ.
5. ಆಂಟನ್ ಚೆಕಾಫ್ (Anton Chekhov): ರಷ್ಯಾದ ಮಹಾನ್ ಕಥೆಗಾರ ಮತ್ತು ನಾಟಕಕಾರ. ಆಧುನಿಕ ಸಣ್ಣಕಥೆಗಳ ಪಿತಾಮಹ ಎಂದು ಕರೆಯಲ್ಪಡುವ ಇವರ ಬರಹಗಳಲ್ಲಿ ಮಾನವ ಭಾವನೆಗಳ ಸೂಕ್ಷ್ಮತೆ ಅದ್ಭುತವಾಗಿ ಮೂಡಿ ಬರುತ್ತವೆ.
6. ಲುಯಿಗಿ ಪಿರಾಂಡೆಲೊ (Luigi Pirandello): ಇಟಲಿಯ ಪ್ರಸಿದ್ಧ ನಾಟಕಕಾರ. 1934ರಲ್ಲಿ ಸಾಹಿತ್ಯ ಲೋಕಕ್ಕೆ ಅತ್ಯಮೂಲ್ಯ ಕೊಡುಗೆಗಾಗಿ ಇವರಿಗೆ ನೋಬೆಲ್ ಪುರಸ್ಕಾರ ಲಭಿಸಿದೆ. ಮಾನವ ಜೀವನದ

ಅಸ್ತಿತ್ವ ಮತ್ತು ಭ್ರಮೆಯ ನಡುವಿನ ಸಂಘರ್ಷವನ್ನು ಇವರ ನಾಟಕಗಳಲ್ಲಿ ಕಾಣಬಹುದು.

7. ಯುಜೀನ್ ಅಯನೆಸ್ಕೊ (Eugene Ionesco): ಇವರು ರೊಮೇನಿಯನ್-ಫ್ರೆಂಚ್ ನ ಪ್ರಸಿದ್ಧ 'ಅಸಂಗತ' ನಾಟಕಕಾರ.

## ಪರಾಮರ್ಶನ ಗ್ರಂಥಗಳು:


1. ದಾಮೋದರ ಶೆಟ್ಟಿ ನಾ., (1998), ರಂಗಶೋಧನ (ರಂಗಭೂಮಿ ಹಾಗೂ ನಾಟಕಗಳ ವಿಮರ್ಶೆ, ಸಮೀಕ್ಷೆಗಳು), ಬೆಂಗಳೂರು: ಭಾರತಾ ಯಾತ್ರಾ ಕೇಂದ್ರ.
2. ಸಿದ್ದಲಿಂಗ ಪಟ್ಟಣಶೆಟ್ಟಿ, (1995), ರಂಗಾಯಣ, ರಂಗಭೂಮಿ – ನಾಟಕ – ಸಾಹಿತ್ಯ ಕುರಿತು ವಿಮರ್ಶಾ ಲೇಖನಗಳು, ಧಾರವಾಡ: ಅನನ್ಯ ಪ್ರಕಾಶನ.
3. ಆದ್ಯ ರಂಗಾಚಾರ್ಯ, (1968), ಕನ್ನಡ ರಂಗಭೂಮಿಯ ಪುರೋಭಿವೃದ್ಧಿ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
4. ಶ್ರೀನಿವಾಸಮೂರ್ತಿ ಕಾ.ವೆಂ., (2018), ಕನ್ನಡ ರಂಗಭೂಮಿ, ಬೆಂಗಳೂರು: ಪುಸ್ತಕ ಮಂಟಪ.